**OS 37-21PW3**

**<u>ದಿನಾಂಕಃ 21.06.2025 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.</u>**

**<u>ಪಾಟಿಸವಾಲು ಪ್ರತಿವಾದಿಗಳ ಪರ ಎಸ್‌ಎಸ್‌ಟಿ ವಕೀಲರಿಂದ</u>**

ನಾನು ಕಳೆದ ಬಾರಿ ಹಾಜರು ಮಾಡುತ್ತೇನೆ ಎಂದು ಹೇಳಿದ ಮೂಲ ನನ್ನ ಬಳಿ ಇಲ್ಲ ಆದ್ದರಿಂದ ಪ್ರತಿಯನ್ನು ಮಾತ್ರ ನೀಡಿರುತ್ತೇನೆ. ಮೂಲ ಪ್ರತಿವಾದಿಗಳ ಕುಟುಂಬದ ಬಳಿ ಇದೆ. ವ್ಯವಸ್ಥಾಪತ್ರದ ಪ್ರಕಾರ ಚಿಕ್ಕಮಗಳೂರಿನಲ್ಲಿ ಇರುವ ಆಸ್ತಿಗಳು ಪ್ರತಿವಾದಿಗಳ ಬಳಿ ಹಾಗೂ ಪುತ್ತೂರು ಕಸಬಲ್ಲಿ ಇರುವ ಆಸ್ತಿಗಳು ವಾದಿಗಳ ಬಳಿ ಇದೆ. ರಿಟ್ ಅಪೀಲು ನಂಬರ್ 494/2016 ನಲ್ಲಿ ಇನ್ನು ಅಂತಿಮ ತಿರ್ಮಾನ ಆಗಿಲ್ಲ ಎಂದರೆ ಸರಿ. ಸದ್ರಿ ಜಾಗದಲ್ಲಿ ಮೃತರು ಏನು ಕೆಲಸ ಮಾಡಿಲ್ಲ. ಬ್ರಿಕ್ ಇಂಡಸ್ಟ್ರಿಸ್ ಮಾಡಿಲ್ಲ. ಸರ್ವೆ ನಂಬರ್ 60 ಮೃತರಿಗೆ ಕೈಗಾರಿಕಾ ಉದ್ದೇಶಕ್ಕಾಗಿ ಮಂಜೂರಾಗಿದ್ದು ಅದು ಅವರ ಸ್ವಂತ ಆಸ್ತಿ ಎಂದರೆ ಸರಿ ಅಲ್ಲ. ದಾವಾ ಆಸ್ತಿಯ ಮಾಲಿಕತ್ವದ ವಿಚಾರ ನ್ಯಾಯಾಲಯದಲ್ಲಿ ಇದೆ, ಇನ್ನು ನಿರ್ಧಾರವಾಗಿಲ್ಲ ಎಂದರೆ ಸರಿ

**ಮರು ವಿಚಾರಣೆ ವಾದಿ ಪರ ಶ್ರೀ ಎಂ ಕೆ ವಿ ವಕೀಲರಿಂದ.**

ಕೌಟುಂಬಿಕ ವ್ಯವಸ್ಥಾಪಕ ಪತ್ರ ಜೀವನ್ ಭಂಡಾರಿಯವರು ಇರುವಾಗ ನೋಟರಿಯವರ ಮುಂದೆ ಒಂದು ಮತ್ತು ಅವರು ತೀರಿಕೊಂಡ ನಂತರ ಅವರ ಹೆಂಡತಿಯೊಂದಿಗೆ ಇನ್ನೊಂದು ಆಗಿರುತ್ತದೆ.

ನನ್ನ ಉಕ್ತಲೇಖನದ ರೀತ್ಯಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ. ಇದೆ

ಪ್ರಧಾನ ಹಿರಿಯ ವ್ಯವಹಾರಿಕ ನ್ಯಾಯಾಧೀಶರು
ಪುತ್ತೂರು